ಡಿ .ಡಬ್ಲ್ಯೂ 1 ಅಸಲು ದಾವಾ ಸಂಖ್ಯೆ11/2017

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ- 03.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಶಂಕರಯ್ಯ ಬಿನ್ ಲೇ.ಸಣ್ಣರಂಗಯ್ಯ<br>47 ವರ್ಷ<br>ವ್ಯವಸಾಯ<br>ಗೊಲ್ಲೇನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ. ಎನ್. ಬಿ.ರವರಿಂದ

ನನ್ನ ತಂದೆ ಸಣ್ಣರಂಗಯ್ಯನಿಗೆ 3 ಜನ ಹೆಂಡತಿಯರು. ಮೊದಲನೇ ಹೆಂಡತಿ ಲಕ್ಷ್ಮಮ್ಮ ಎಂದರೆ ಸರಿ. ಸದರಿ ಲಕ್ಷ್ಮಮ್ಮ ನಿಗೆ ರಂಗಮ್ಮ (ಪ್ರತಿವಾದಿ 5 ), ಮತ್ತು ಬಿ.ಎಸ್.ರಂಗಸ್ವಾಮಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. 1 ನೇ ವಾದಿ ಸದರಿ ರಂಗಸ್ವಾಮಯ್ಯನ ಹೆಂಡತಿ, ವಾದಿ 2 ರಿಂದ 4 ರಂಗಸ್ವಾಮಯ್ಯನ ಮಕ್ಕಳು ಎಂದರೆ ಸರಿ. ರಂಗಸ್ವಾಮಯ್ಯನ ಹಿರಿಯ ಮಗಳು ಸರಸ್ವತಿ ಮೃತಪಟ್ಟಿರುತ್ತಾಳೆ ಎಂದರೆ ಸರಿ.

2. ಸದರಿ ಸಣ್ಣರಂಗಯ್ಯನ 2 ನೇ ಹೆಂಡತಿ ಭದ್ರಮ್ಮ ಎಂದರೆ ಸರಿ. ಸದರಿ ಭದ್ರಮ್ಮನಿಗೆ ಪ್ರತಿವಾದಿ 6 ಒಬ್ಬಳೇ ಮಗಳು ಎಂದರೆ ಸರಿ.

3. ಸದರಿ ಸಣ್ಣರಂಗಯ್ಯನ 3 ನೇ ಹೆಂಡತಿ ಲಕ್ಷ್ಮೀದೇವಮ್ಮ ಎಂದರೆ ಸರಿ. ಸದರಿ ಲಕ್ಷ್ಮೀದೇವಮ್ಮನಿಗೆ 3 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ನಾನು , ಪ್ರತಿವಾದಿ 2 ಮತ್ತು 3 ಎಂದರೆ ಸರಿ.

4. ದಾವಾಸ್ವತ್ತು 5 ಅಂದರೆ ಸ.ನಂ॰49/3 ಮತ್ತು ಸ.ನಂ॰49/4 ರಲ್ಲಿ ಸುಮಾರು 80 ತೆಂಗಿನ ಮರಗಳು ಇದೆ ಹಾಗೂ ಸದರಿ ಜಮೀನುಗಳ ಅರ್ಧಭಾಗದಲ್ಲಿ ಅಡಿಕೆ ತೋಟ ಇದೆ. ಸದರಿ ತೆಂಗಿನ ಮರಗಳನ್ನು ನನ್ನ ತಂದೆಗೆ ಮಾರಾಟ ಮಾಡಿದವರು ನೆಟ್ಟಿದ್ದರು. ಸದರಿ ತೆಂಗಿನ ಮರಗಳು ಸುಮಾರು 30 ವರ್ಷ ವಯಸ್ಸಿನವು ಎಂದರೆ ಸರಿಯಲ್ಲ. ಸದರಿ ತೆಂಗಿನ ಮರಗಳನ್ನು ನನ್ನ ತಂದೆ ಸಣ್ಣರಂಗಯ್ಯನವರೇ ನೆಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮಗೆ ಜಮೀನು ಮಾರಾಟ ಮಾಡಿದವರು ನೆಟ್ಟಿದ್ದರು. ಸದರಿ ಜಮೀನುಗಳು ನಾವು ಖರೀದಿ ಮಾಡುವಾಗ ಖಾಲಿ ಜಾಗ ಆಗಿತ್ತು ಎಂದು ಸ್ವತಃ ನುಡಿಯುತ್ತಾರೆ.

5. ಸ.ನಂ30/3(ದಾವಾಸ್ವತ್ತು 4 ) ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾಸ್ವತ್ತು 5 ಕೂಡ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ಕೊಂಡಿರುವ ಜಮೀನು ಎನ್ನುತ್ತಾರೆ. ದಾವಾಸ್ವತ್ತು 4 ಅನ್ನು ನಾವು ಮತ್ತು ನಮ್ಮ ತಂದೆ ಅವರ ಜೀವಿತ ಕಾಲದಲ್ಲೇ ಮಾರಾಟ ಮಾಡಿರುತ್ತೇವೆ. ನಿ.ಪಿ.15 ರಂತೆ ನನ್ನ ತಂದೆ , ನಾನು ಮತ್ತು ಪ್ರತಿವಾದಿ 2 ಹಾಗೂ ಮೈನರ್ ಪ್ರತಿವಾದಿ 3 ರವರ ಪರವಾಗಿ ನನ್ನ ತಂದೆ ದಾವಾಸ್ವತ್ತು 4 ಅನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ನಿ.ಪಿ.15 ಕ್ಕೆ ರಂಗಸ್ವಾಮಯ್ಯ ಹಾಗೂ ರಂಗಮ್ಮ(ಪ್ರತಿವಾದಿ 5), ಶಿವಮ್ಮ (ಪ್ರತಿವಾದಿ 6) ಸಹಿ ಮಾಡಿಲ್ಲ ಎಂದರೆ ಸರಿ.

ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ